ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್ಎಸ್ಎಸ್/04/ಐಡಿಪಿ/2017-18/31

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ:05-09-2017

<u>ಜ್ಞಾಪನ</u>

ವಿಷಯ: ತೇಜಸ್ವಿ ಜೀವಲೋಕ 79 ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ.
ಉಲ್ಲೇಖ: ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ಸಾಮಾನ್ಯ/2017-18/221
ದಿನಾಂಕ: 04.09.2017

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ನಮ್ಮೆಲ್ಲರ ನಡುವೆ ಹಾಸು ಹೊಕ್ಕಾಗಿರುವ ಪೂರ್ಣಚಂದ್ರ ತೇಜಸ್ವೀ (1938-2007) ಯವರ ನೆನಪಿಗೆ ಈಗ 79 ವರ್ಷಗಳು. ತೇಜಸ್ವಿಯವರ ನೆನಪನ್ನು ಇನ್ನಷ್ಟು ಹೊಳಪುಗೊಳಿಸಲೆಂದು 2013 ರಿಂದ ತೇಜಸ್ವಿ ಜೀವಲೋಕ ಹೆಸರಿನಲ್ಲಿ, ನಮ್ಮ ಸುತ್ತಲಿನ ನಿಸರ್ಗ ವಿಸ್ಮಯಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಪ್ರಯತ್ನ ಮಾಡಲಾಗುತ್ತಿದೆ. ತೇಜಸ್ವಿಯವರಿಂದ ಪ್ರಭಾವಿತರಾದ ಕನ್ನಡ ನಾಡಿನ ಪ್ರತಿಭಾನ್ವಿತ ಛಾಯಾಗ್ರಾಹಕರು ಸೆರೆಹಿಡಿದ ಪಕ್ಷಿ, ಕೀಟ, ಪುಷ್ಪಗಳ ಅಪೂರ್ವ ಛಾಯಾಚಿತ್ರಗಳ ಪ್ರದರ್ಶನಗಳನ್ನು ಹಕ್ಕಿಲೋಕ 2013, ಕೀಟಲೋಕ 2014, ಪುಷ್ಪಲೋಕ 2015 ಹಾಗೂ ಪರಾಗಸ್ಪರ್ಶಿಗಳು 2016 ಹೆಸರಿನಲ್ಲಿ ಆಯೋಜಿಸಿ ಇದೀಗ ಜೇಡಲೋಕ 2017 ಅನ್ನು ಇಕೋಕ್ಲಬ್, ಚಿತ್ರಕಲಾ ಮಹಾವಿದ್ಯಾಲಯ, ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ 'ರಸ್ತೆ, ಬೆಂಗಳೂರು ಇವರ ಸಹಭಾಗಿತ್ವದಲ್ಲಿ ಕಾರ್ಯಕ್ರಮವು ಸೆಪ್ಟೆಂಬರ್ 8 ರಿಂದ 14 ರ ವರೆಗೆ ನಡೆಸಲಾಗುತ್ತಿದೆ.

ಈ ಸಂದರ್ಭದಲ್ಲಿ ಯಾವುದಾದರು ಒಂದು ದಿನ ಎನ್.ಎಸ್.ಎಸ್. ಅಧಿಕಾರಿಗಳು ಮತ್ತು ಸ್ವಯಂಸೇವಕರು ಭಾಗವಹಿಸಿ ಛಾಯಾಚಿತ್ರ, ಸಾಕ್ಷ್ಯಚಿತ್ರಗಳನ್ನು ವೀಕ್ಷಿಸಿ ತಜ್ಞರೊಂದಿಗೆ ಸಂವಾದದಲ್ಲಿ ಭಾಗವಹಿಸಿ, ಮಾಹಿತಿಯನ್ನು ರಾ.ಸೇ.ಯೋ ಕಛೇರಿಗೆ ನೀಡಬೇಕೆಂದು ಸೂಚಿಸಲಾಗಿದೆ.

ನಿರ್ದೇಶಕರು

ಪ್ರತಿ: 1 ಬೆಂಗಳೂರಿನ ಸರ್ಕಾರಿ/ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ
2. ರಾಜ್ಯ ಎನ್.ಎಸ್.ಎಸ್ ಅಧಿಕಾರಿ ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ ರಾಷ್ಟ್ರೀಯ ಸೇವಾ ಯೋಜನೆ ಕೋಶ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
3. ಇ-ಆಡಳಿತ ಅಂತರ್ಜಾಲತಾಣದಲ್ಲಿ ಪ್ರಕಟಿಸಲು
4. ಕಛೇರಿ ಕಡತಕ್ಕೆ.